# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಯಲಹಂಕ ವಲಯ, ವಿದ್ಯಾರಣ್ಯಪುರ

ಸಂ. ನೋ.ಅ/ಬಿ.ಬಿ.ಎಂ.ಪಿ/ವಿ–14 /ಪಿಆರ್ ನಂ/01/2022–23

ವಿದ್ಯಾರಣ್ಯಪುರ ವಾರ್ಡ್ ಕಛೇರಿ
ಇಂದಿರಾ ಕ್ಯಾಂಟೀನ್ ಪಕ್ಕ,
ಹೆಚ್.ಎಂ.ಟಿ ಲೇಔಟ್, 1ನೇ ಬ್ಲಾಕ್,
ಬಿಬಿಎಂಪಿ, ಬೆಂಗಳೂರು 560097
ದಿನಾಂಕ : 03/09/2022

**ಮಾನ್ಯ ಆಯುಕ್ತರು ರವರ ಸುತ್ತೋಲೆ ಸಂಖ್ಯೆ ಬಿ12(5)/ಪಿ.ಆರ್/35/2020–21 ದಿನಾಂಕ 21/09/2020ರ ಆದೇಶದ ಅನ್ವಯ ವಾರ್ಡ್ ನಂ 14 ವಿದ್ಯಾರಣ್ಯಪುರ ವಾರ್ಡ್ ಕಛೇರಿಯಲ್ಲಿ ದಿನಾಂಕ 03/09/2022 ರಂದು ನೋಡೆಲ್ ಅಧಿಕಾರಿ ರವರ ಅಧ್ಯಕ್ಷತೆಯಲ್ಲಿ ಕೈಗೊಂಡ ವಾರ್ಡ್ ಸಮಿತಿ ಸಭೆಯ ನಡವಳಿಗಳು**

## ಹಾಜರಿದ್ದ ಅಧಿಕಾರಿ /ನೌಕರರು

1. ಶ್ರೀ ಜನಾರ್ಧನ್, ನೋಡಲ್ ಅಧಿಕಾರಿ ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರರು, ಘನತ್ಯಾಜ್ಯ ನಿರ್ವಹಣಾ ವಿಭಾಗ
2. ಶ್ರೀ ಅರ್ಚನಾ, ಸಹಾಯಕ ಅಭಿಯಂತರರು & ಕಾರ್ಯದರ್ಶಿ ಹಾಗೂ ಸಂಚಾಲಕರು
3. ಶ್ರೀಮತಿ ಧನಲಕ್ಷ್ಮಿ ಎಂ, ಸಹಾಯಕ ಅಭಿಯಂತರರು, ಬಿಡಬ್ಲ್ಯೂಎಸ್ಎಸ್‌ಬಿ
4. ಶ್ರೀ ಲಿಂಗರಾಜು, ಹಿರಿಯ ಆರೋಗ್ಯ ಪರಿವೀಕ್ಷಕರು
5. ಶ್ರೀ ಸಿದ್ದರಾಜು, ಕಿರಿಯ ಆರೋಗ್ಯ ಪರಿವೀಕ್ಷಕರು

## ಹಾಜರಿದ್ದ ವಾರ್ಡ್ ಸಮಿತಿ ಸದಸ್ಯರು

1. ಕಿರಣ್, ಹೆಚ್.ಎಂ.ಟಿ ಲೇಔಟ್
2. ರಘು, ದುರ್ಗಾ ಬಡಾವಣೆ
3. ಶಶಾಂಕ್, ಹೆಚ್.ಎಂ.ಟಿ ಲೇಔಟ್
4. ಇತರೆ ಸಾರ್ವಜನಿಕರು

ವಾರ್ಡ್ ಸಮಿತಿಯ ಪ್ರಾಸ್ತಾವಿಕ ಸಭೆಯ ಉದ್ದೇಶವನ್ನು ತಿಳಿಸಿ, ಸಭೆಯಲ್ಲಿ ಉಪಸ್ಥಿತರಿದ್ದ ಎಲ್ಲಾ ಅಧಿಕಾರಿಗಳನ್ನು ಸ್ವಾಗತಿಸಿ ಸಭೆಯನ್ನು ನಡೆಸಲಾಯಿತು.

1. ದಿನಾಂಕ 03/09/2022ರಂದು ಚರ್ಚಿಸಿರುವ ವಿಷಯಗಳು

| ಕ್ರ.ಸಂ. | ವಿಷಯ ಸೂಚಿ | ಚರ್ಚಿಸಿದ ವ್ಯಕ್ತಿಯ ಹೆಸರು | ನಿರ್ಣಯ | ಕ್ರಮ ತೆಗೆದುಕೊಳ್ಳಬೇಕಾದ ಅಧಿಕಾರಿ |
|---|---|---|---|---|
| 1 | ಚುನಾವಣೆ ಪ್ರಾರಂಭವಾಗುವ 6 ತಿಂಗಳ ಮುಂಚಿತವಾಗಿ ಮತದಾರರ ಗುರುತಿನ ಚೀಟಿ ಹಂಚಲು ಹೆಚ್ಚುವರಿಯಾಗಿ ಬಿ.ಎಲ್.ಓ ಗಳನ್ನು ನಿಯೋಜಿಸಲು ಹಾಗೂ ಮತದಾರರ ಗುರುತಿನ ಚೀಟಿ ವಿತರಣೆಯ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಲು ಘೋಷಣೆ ಹೊರಡಿಸಲು ಕೋರಿರುತ್ತಾರೆ. | ಕಿರಣ್ | ಕ್ರಮ ವಹಿಸಲು ತಿಳಿಸಲಾಗುವುದು | ಸದರಿ ವಾರ್ಡ್‌ನ ಸ.ಕಂ.ಅ (ಚುನಾವಣೆ) |

| | | | | |
|---|---|---|---|---|
| 2 | ವಾರ್ಡ್ ನಕ್ಷೆ, ವಾರ್ಡ್‌ನ ಅಳತೆ, ಒಟ್ಟು ಮತದಾರರ ಸಂಖ್ಯೆಯನ್ನು ವಾರ್ಡ್ ಕಛೇರಿಯಲ್ಲಿ ಪ್ರದರ್ಶಿಸಲು ಹಾಗೂ ಸಾರ್ವಜನಿಕರಿಗೆ ಸಂಬಂಧಿಸಿದಂತೆ ದೂರುಗಳು ನಿರಂತರವಾಗಿ ಬರುತ್ತಿರುವುದರಿಂದ ಸಾರ್ವಜನಿಕರಿಗೆ ಅನುಕೂಲವಾಗುವಂತೆ ಕಂದಾಯ ಇಲಾಖೆ, ತೋಟಗಾರಿ ಇಲಾಖೆ, ಘನತ್ಯಾಜ್ಯ ನಿರ್ವಹಣೆ, ವಿದ್ಯುತ್ ದೀಪಗಳ ನಿರ್ವಹಣೆ, ಬೃಹತ್ ನೀರು ಗಾಲುವೆ, ಕಾಮಗಾರಿ ಇಲಾಖೆಗೆ ಸಂಬಂಧ ಪಟ್ಟ ಅಧಿಕಾರಿ ನೌಕರರ ಹೆಸರು, ಮೊಬೈಲ್ ಸಂಖ್ಯೆಗಳನ್ನು ವಾರ್ಡ್ ಕಛೇರಿಯಲ್ಲಿ ಪ್ರದರ್ಶಿಸಲು ಕೋರಿರುತ್ತಾರೆ. | ಕಿರಣ್ | ಕ್ರಮ ವಹಿಸಲು ತಿಳಿಸಲಾಯಿತು | ಸಹಾಯಕ ಅಭಿಯಂತರರು ವಿದ್ಯಾರಣ್ಯಪುರ |
| 3 | ನಾರಾಯಣ ಸ್ಕೂಲ್ ರಸ್ತೆಯಿಂದ ತಿಂಡ್ಲು ಮುಖ್ಯ ರಸ್ತೆಯವರೆಗೆ ಇರುವಂತಹ ರಾಜಕಾಲುವೆಗೆ ಚೈನ್ ಲಿಂಕ್ ಫೆನ್ಸಿಂಗ್ ಅಳವಡಿಸಲು ಕೋರಿದರು. | ಕಿರಣ್ | ಕ್ರಮ ವಹಿಸಲು ತಿಳಿಸಲಾಗುವುದು | ಸ.ಕಾ.ಅ ಬೃನೀ.ಗಾಲುವೆ, ಯಲಹಂಕ ವಲಯ |
| 4 | ಗುರುದರ್ಶನ್ ಬಡಾವಣೆಯಲ್ಲಿ ರಾಜಕಾಲುವೆ ಕಾರ್ಯ ಅರ್ಧಕ್ಕೆ ಸ್ಥಗಿತಗೊಂಡಿದ್ದು, ಮಳೆ ಹೆಚ್ಚಾಗುವ ಸಂಭವವಿದ್ದು, ರಾಜಕಾಲುವೆಯ ನೀರು ರಸ್ತೆಗೆ ಬರುವ ಸಾದ್ಯತೆಯಿರುವುದರಿಂದ ರಾಜಕಾಲುವೆ ಕಾಮಗಾರಿಯನ್ನು ಪೂರ್ಣ ಗೊಳಿಸಲು ಕೋರಿದರು. | ಕಿರಣ್ | ಕ್ರಮ ವಹಿಸಲು ತಿಳಿಸಲಾಗುವುದು | ಸ.ಕಾ.ಅ ಬೃನೀ.ಗಾಲುವೆ, ಯಲಹಂಕ ವಲಯ |
| 5 | ತಳ್ಳುವ ಗಾಡಿಗಳಿಗೆ ಕಸ ಕೊಡದೆ ಗಾಡಿ ಹೋದ ನಂತರ ಬ್ಲಾಕ್‌ಸ್ಪಾಟ್‌ಗಳಿಗೆ ಕಸ ಹಾಕುವವರ ಛಾಯಾಚಿತ್ರವನ್ನು ತೆಗೆದು ದಂಡ ವಿಧಿಸಲು ಕ್ರಮ ವಹಿಸಲು ಕೋರಿದರು. | ಕಿರಣ್ | ಕ್ರಮ ವಹಿಸಲು ತಿಳಿಸಲಾಗುವುದು | ಕಿ.ಆ.ಪ, ವಾರ್ಡ್ ನಂ 14 |
| 6 | ವಿದ್ಯಾರಣ್ಯಪುರ ಮುಖ್ಯ ರಸ್ತೆಯಲ್ಲಿ ಪಾದಾಚಾರಿ ಮಾರ್ಗವನ್ನು ಅಕ್ರಮಿಸಿಕೊಂಡು ಬೀದಿ ಬದಿ ವ್ಯಾಪಾರ ಮಾಡುತ್ತಿದ್ದು, ಪಾದಚಾರಿ ಮಾರ್ಗಗಳಲ್ಲಿ ಸಂಚರಿಸುತ್ತಿರುವ ನಿವಾಸಿಗಳಿಗೆ ತೊಂದರೆಯಾಗುತ್ತಿರುವುದರಿಂದ ಪಾದಚಾರಿ ಮಾರ್ಗದ ಒತ್ತುವರಿಯನ್ನು ತೆರವುಗೊಳಿಸಲು ಕೋರಿದರು. | ರಘು | ಕ್ರಮ ವಹಿಸಲು ತಿಳಿಸಲಾಗುವುದು | ಸಹಾಯಕ ಅಭಿಯಂತರರು, ವಿದ್ಯಾರಣ್ಯಪುರ |
| 7 | ವಿದ್ಯಾರಣ್ಯಪುರ ಮುಖ್ಯ ರಸ್ತೆ ಹಾಗೂ ಸಾಯಿ ಬಾಬಾ ದೇವಸ್ಥಾನದ ಹತ್ತಿರ ವಾಹನಗಳನ್ನು ಎಲ್ಲೆಂದರಲ್ಲಿ ನಿಲುಗಡೆಗೊಳಿಸುತ್ತಿರುವುದರಿಂದ ಟ್ರಾಫಿಕ್ ಸಮಸ್ಯ ಹೆಚ್ಚಾಗಿ ಬೇರೆ ವಾಹನಗಳ ಓಡಾಟಕ್ಕೆ ತೊಂದರೆ ಉಂಟಾಗುತ್ತಿರುತ್ತದೆ. | ರಘು | ಕ್ರಮ ವಹಿಸಲು ತಿಳಿಸಲಾಗುವುದು | ಟ್ರಾಫಿಕ್ ಪೋಲೀಸ್ ಸ್ಟೇಷನ್, ಯಲಹಂಕ |
| 8 | ಕಾಳಿಕಾ ದುರ್ಗಾ ಪರಮೇಶ್ವರಿ ದೇವಸ್ಥಾನದ ರಸ್ತೆಯಲ್ಲಿ ಖಾಲಿ ನಿವೇಶನಗಳ ಸ್ವಚ್ಛತಾ ಕಾರ್ಯ ನಿರ್ವಹಿಸಲು ಕೋರಿದರು. | ರಘು | ಈಗಾಗಲೇ ನಿವೇಶನದ ಮಾಲೀಕರಿಗೆ ನೋಟೀಸ್ ಜಾರಿ ಮಾಡಲಾಗಿರುತ್ತದೆ | ಕಿ.ಆ.ಪ, ವಾರ್ಡ್ ನಂ 14 |

| | | | | |
|---|---|---|---|---|
| 9 | ಸಭೆ ಸಮಾರಂಭಗಳಲ್ಲಿ ಸ್ವತ್ತಿನ ಮಾಲೀಕರು ರಸ್ತೆಯನ್ನು ಒತ್ತುವರಿ ಮಾಡಿ ಶಾಮಿಯಾನ/ಪೆಂಡಾಲ್ ಹಾಕುತ್ತಿರುವುದರಿಂದ ಸದರಿ ರಸ್ತೆಯಲ್ಲಿ ಸಂಚರಿಸುವ ನಿವಾಸಿಗಳ ಓಡಾಟಕ್ಕೆ ತೊಂದರೆ ಉಂಟಾಗುತ್ತಿರುವುದರಿಂದ ಇಂತಹ ಸ್ವತ್ತಿನ ಮಾಲೀಕರ ವಿರುದ್ಧ ಕ್ರಮ ವಹಿಸಲು ಕೋರಿದರು. | ಶಶಾಂಕ್ | ಸಭೆಯಲ್ಲಿ ಹಾಜರಿದ್ದ ಸಹಾಯಕ ಅಭಿಯಂತರರು ರವರಿಗೆ ಕ್ರಮ ವಹಿಸಲು ತಿಳಿಸಲಾಯಿತು. | ಸಹಾಯಕ ಅಭಿಯಂತರರು, ವಿದ್ಯಾರಣ್ಯಪುರ |
| 10 | ವಾರ್ಡ್ ವ್ಯಾಪ್ತಿಯಲ್ಲಿ ಸ್ವತ್ತಿನ ಮಾಲೀಕರು ಕೊಳವೆ ಬಾವಿ ಕೊರೆದು ಮಣ್ಣು ಮತ್ತು ನೀರನ್ನು ಚರಂಡಿಗಳಿಗೆ ಬಿಡುತ್ತಿರುವುದರಿಂದ ಮಳೆ ನೀರು ಚರಂಡಿಯಲ್ಲಿ ಸರಾಗವಾಗಿ ಹರಿಯದೆ ರಸ್ತೆಯಲ್ಲಿ ಹರಿಯುತ್ತಿರುವುದರಿಂದ ಕೊಳವೆ ಬಾವಿ ಕೊರೆಯುತ್ತಿರುವ ಸ್ವತ್ತಿನ ಮಾಲೀಕರ ವಿರುದ್ಧ ಕ್ರಮ ವಹಿಸಲು ಕೋರಿದರು. | ಶಶಾಂಕ್ | ಸಭೆಯಲ್ಲಿ ಹಾಜರಿದ್ದ ಸಹಾಯಕ ಅಭಿಯಂತರರು ರವರಿಗೆ ಕ್ರಮ ವಹಿಸಲು ತಿಳಿಸಲಾಯಿತು. | ಸಹಾಯಕ ಅಭಿಯಂತರರು ವಿದ್ಯಾರಣ್ಯಪುರ ಬಿಬಿಎಂಪಿ/ಬಿಡಬ್ಲ್ಯೂಎಸ್‌ಎಸ್‌ಬಿ |
| 11 | ವಾರ್ಡ್ ವ್ಯಾಪ್ತಿಯಲ್ಲಿ ಕಟ್ಟಡ ನಿರ್ಮಾಣ ಮಾಡುವಾಗ ಕಟ್ಟಡದ ಭಗ್ನಾವಶೇಷಗಳನ್ನು ಎಲ್ಲೆಂದರಲ್ಲಿ ಹಾಕುತ್ತಿರುವುದರಿಂದ ರಸ್ತೆಯಲ್ಲಿ ಸಂಚರಿಸುವ ವಾಹನಗಳ ಸಂಚಾರಕ್ಕೆ ತೊಂದರೆ ಉಂಟಾಗುತ್ತಿರುತ್ತದೆ, 40' ಅಡಿ ರಸ್ತೆಯಲ್ಲಿ ವಾಣಿಜ್ಯ ಕಟ್ಟಡಗಳಿಗೆ ನಕ್ಷೆ ಅನುಮೋದನೆ ನೀಡದೆ ಇದ್ದರೂ ವಾಣಿಜ್ಯ ಕಟ್ಟಡಗಳು ತಲೆ ಎತ್ತುತ್ತಿರುವ ಬಗ್ಗೆ ಹಾಗೂ ವಾರ್ಡ್ ವ್ಯಾಪ್ತಿಯಲ್ಲಿ 5 ರಿಂದ 7 ಮಹಡಿಗಳ ಕಟ್ಟಡಗಳು ಅನಧಿಕೃತವಾಗಿ ನಿರ್ಮಾಣ ಮಾಡುವುದಕ್ಕೆ ಮೊದಲು ಸಹಾಯಕ ಅಭಿಯಂತರರು ಅನಧಿಕೃತ ಕಟ್ಟಡಗಳ ಬಗ್ಗೆ ಗಮನಹರಿಸಿ ಕ್ರಮ ಕೈಗೊಳ್ಳಲು ಕೋರಿರುತ್ತಾರೆ. | ಶಶಾಂಕ್ | ಸಭೆಯಲ್ಲಿ ಹಾಜರಿದ್ದ ಸಹಾಯಕ ಅಭಿಯಂತರರು ರವರಿಗೆ ಕ್ರಮ ವಹಿಸಲು ತಿಳಿಸಲಾಯಿತು. | ಸಹಾಯಕ ಅಭಿಯಂತರರು ವಿದ್ಯಾರಣ್ಯಪುರ |
| 12 | ದುರ್ಗಾ ದೇವಸ್ಥಾನದ ರಸ್ತೆ, ಹಳೆ ಪೋಸ್ಟ್ ಆಫೀಸ್ ರಸ್ತೆಯಲ್ಲಿ ಜನಸಂದಣಿ ಹೆಚ್ಚಾಗಿದ್ದು, ಅಪಘಾತಗಳು ಸಂಭವಿಸುವ ಸಾಧ್ಯತೆ ಇರುವುದರಿಂದ ರಸ್ತೆ ಉಬ್ಬುಗಳನ್ನು ಅಳವಡಿಸಲು ಹಾಗೂ ಸುಮಧುರ ಅಪಾರ್ಟ್‌ಮೆಂಟ್, ಪ್ರೆಸ್ಟೀಜ್ ಅಪಾರ್ಟ್‌ಮೆಂಟ್ ಕಟ್ಟಡ ಕಾಮಗಾರಿ ಮುಕ್ತಾಯ ಹಂತದಲ್ಲಿದ್ದು, ಅಪಾರ್ಟ್‌ಮೆಂಟ್‌ಗಳಲ್ಲಿ ಸಾರ್ವಜನಿಕರು ವಾಸ ಮಾಡುವುದಕ್ಕೆ ಮುಂಚಿತವಾಗಿ ಸಾರ್ವಜನಿಕರ ಸುರಕ್ಷತೆಗಾಗಿ ಅಪಘಾತಗಳು ಸಂಭವಿಸದಂತೆ ರಸ್ತೆ ಉಬ್ಬುಗಳನ್ನು ಅಳವಡಿಸಲು ಕೋರಿದರು. | ಶಶಾಂಕ್ | ಸ್ಥಳ ಪರಿಶೀಲಿಸಿ ಸೂಕ್ತ ಕ್ರಮ ವಹಿಸಲು ಕೋರಲಾಗಿದೆ. | ಸಹಾಯಕ ಕಾರ್ಯಪಾಲಕ ಅಭಿಯಂತರರು, ಟ್ರಾಫಿಕ್ ಇಂಜಿನಿಯರಿಂಗ್ ಸೆಲ್, ಬಿಬಿಎಂಪಿ |

ಮುಂದಿನ ಸಭೆಯಲ್ಲಿ ವಾರ್ಡಿನ ಕುಂದು ಕೊರತೆಗೆ ಸಂಬಂಧಿಸಿದ ಎಲ್ಲಾ ಇಲಾಖೆಗಳ ಅಧಿಕಾರಿ/ಸಿಬ್ಬಂದಿಗಳು ಕಡ್ಡಾಯವಾಗಿ ಹಾಜರಾಗುವುದು ಹಾಗೂ ಮೇಲ್ಕಂಡ ಎಲ್ಲಾ ಅಂಶಗಳಿಗೂ ಕ್ರಮ ಕೈಗೊಳ್ಳಬೇಕಾದ ಎಲ್ಲಾ ಅಧಿಕಾರಿಗಳು ಸೂಕ್ತ ಕ್ರಮ ತೆಗೆದುಕೊಂಡ ಬಗ್ಗೆ ಪೂರ್ಣ ಮಾಹಿತಿಯೊಂದಿಗೆ ಮುಂದಿನ ಸಭೆಗೆ ಹಾಜರಾಗಲು ಕೋರಲಾಗಿರುತ್ತದೆ.

ಮುಂದಿನ ಸಭೆಯಲ್ಲಿ ಸಾಧಿಸಬೇಕಾದ ಗುರಿ ಹಾಗೂ ಸಾಧನೆ ಬಗ್ಗೆ ಚರ್ಚಿಸಲು ಸಭೆಯಲ್ಲಿ ತೀರ್ಮಾನಿಸಿ ವಂದನಾರ್ಪಣೆಯೊಂದಿಗೆ ಕಾರ್ಯದರ್ಶಿಗಳು ಸಭೆಯನ್ನು ಮುಕ್ತಾಯಗೊಳಿಸಿದರು.

03/09/22

ಸದಸ್ಯ ಕಾರ್ಯದರ್ಶಿ
ವಾರ್ಡ್ ನಂ 14, ವಿದ್ಯಾರಣ್ಯಪುರ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ನೋಡಲ್ ಅಧಿಕಾರಿಗಳು
ವಾರ್ಡ್ ನಂ 14, ವಿದ್ಯಾರಣ್ಯಪುರ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಪ್ರತಿಯನ್ನು:

1. ಮಾನ್ಯ ಮುಖ್ಯ ಆಯುಕ್ತರು, ಬಿಬಿಎಂಪಿ, ಕೇಂದ್ರ ಕಛೇರಿ ರವರ ಮಾಹಿತಿಗಾಗಿ ಸಲ್ಲಿಸಿದೆ.
2. ಮಾನ್ಯ ವಲಯ ಆಯುಕ್ತರು, ಯಲಹಂಕ ವಲಯ, ಬಿಬಿಎಂಪಿ ರವರ ಮಾಹಿತಿಗಾಗಿ ಸಲ್ಲಿಸಿದೆ.
3. ಮಾನ್ಯ ಜಂಟಿ ಆಯುಕ್ತರು, ಯಲಹಂಕ ವಲಯ, ಬಿಬಿಎಂಪಿ ರವರ ಮಾಹಿತಿಗಾಗಿ ಸಲ್ಲಿಸಿದೆ.
4. ಮುಖ್ಯ ಅಭಿಯಂತರರು, ಯಲಹಂಕ ವಲಯ, ಬಿಬಿಎಂಪಿ ರವರ ಮಾಹಿತಿಗಾಗಿ ಸಲ್ಲಿಸಿದೆ.
5. ಕಾರ್ಯಪಾಲಕ ಅಭಿಯಂತರರು, ಬ್ಯಾಟರಾಯನಪುರ ವಿಭಾಗ, ಬಿಬಿಎಂಪಿ ರವರ ಮಾಹಿತಿಗಾಗಿ ಸಲ್ಲಿಸಿದೆ.
6. ವಲಯ ಅರಣ್ಯಾಧಿಕಾರಿ, ಯಲಹಂಕ ವಲಯ ರವರ ಮಾಹಿತಿಗಾಗಿ ಸಲ್ಲಿಸಿದೆ.
7. ತೋಟಗಾರಿಕೆ ಅಧೀಕ್ಷಕರು, ಯಲಹಂಕ ವಲಯ ರವರ ಮಾಹಿತಿಗಾಗಿ ಸಲ್ಲಿಸಿದೆ.
8. ಸಹಾಯಕ ಕಾರ್ಯಪಾಲಕ ಅಭಿಯಂತರರು, ವಿದ್ಯಾರಣ್ಯಪುರ ಉಪವಿಭಾಗ, ಬೆಸ್ಕಾಂ ರವರ ಮಾಹಿತಿಗಾಗಿ ಸಲ್ಲಿಸಿದೆ.
9. ಸಹಾಯಕ ಕಾರ್ಯಪಾಲಕ ಅಭಿಯಂತರರು, ವಿದ್ಯಾರಣ್ಯಪುರ ಉಪವಿಭಾಗ, ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರ ಮಾಹಿತಿಗಾಗಿ ಸಲ್ಲಿಸಿದೆ.
10. ಸಹಾಯಕ ಕಾರ್ಯಪಾಲಕ ಅಭಿಯಂತರರು, ವಿದ್ಯಾರಣ್ಯಪುರ ಉಪವಿಭಾಗ, ಬಿಬಿಎಂಪಿ ರವರ ಮಾಹಿತಿಗಾಗಿ ಸಲ್ಲಿಸಿದೆ.
11. ಪೋಲೀಸ್ ಇನ್ಸ್‌ಪೆಕ್ಟರ್, ಸಂಚಾರ ಪೋಲೀಸ್ ಠಾಣೆ, ವಿದ್ಯಾರಣ್ಯಪುರ/ಕೊಡಿಗೆಹಳ್ಳಿ ರವರ ಮಾಹಿತಿಗಾಗಿ ಸಲ್ಲಿಸಿದೆ.
12. ಸಹಾಯಕ ಕಾರ್ಯಪಾಲಕ ಅಭಿಯಂತರರು, ಟ್ರಾಫಿಕ್ ಇಂಜಿನಿಯರಿಂಗ್ ಸೆಲ್, ಬಿಬಿಎಂಪಿ, ಬೆಂಗಳೂರು ರವರ ಮಾಹಿತಿಗಾಗಿ ಸಲ್ಲಿಸಿದೆ.
13. ಸಹಾಯಕ ಕಂದಾಯ ಅಧಿಕಾರಿ, ವಿದ್ಯಾರಣ್ಯಪುರ ಉಪವಿಭಾಗ, ಬಿಬಿಎಂಪಿ ರವರ ಮಾಹಿತಿಗಾಗಿ ಸಲ್ಲಿಸಿದೆ.
14. ಸಹಾಯಕ ಕಾರ್ಯಪಾಲಕ ಅಭಿಯಂತರರು, ಘನತ್ಯಾಜ್ಯ ವಿಭಾಗ, ಬಿಬಿಎಂಪಿ ರವರ ಮಾಹಿತಿಗಾಗಿ ಸಲ್ಲಿಸಿದೆ.
15. ವಾರ್ಡ್ ಸಮಿತಿ ಸದಸ್ಯರುಗಳ ಮಾಹಿತಿಗಾಗಿ ಸಲ್ಲಿಸಿದೆ.
16. ಕಛೇರಿ ಕಡತಕ್ಕೆ.